ಡಿ. ಡಬ್ಲ್ಯೂ: 1

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22-02-2025)

ಪಾಟೀ ಸವಾಲು : ವಾದಿ ಪರ ಶ್ರೀ ಎನ್ ಎಸ್ ಆರ್ ಬಿ ವಕೀಲರಿಂದ,

ನಾನು ಎಸ್ ಎಸ್ ಎಲ್ ಸಿ ಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ನನ್ನ ಅಜ್ಜ ಲಚ್ಮಯ್ಯ ನಾಯ್ಕ ರವರನ್ನು ನೋಡಿರುತ್ತೇನೆ. ನನ್ನ ಅಜ್ಜನವರ ಮರಣ ಕಾಲಕ್ಕೆ ನನಗೆ ನಾಲ್ಕು ವರ್ಷ ವಯಸ್ಸಾಗಿತ್ತು. ನನ್ನ ತಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆಯವರ ಮರಣ ಕಾಲಕ್ಕೆ ನನಗೆ ಹನ್ನೆರಡು ವರ್ಷ ವಯಸ್ಸಾಗಿತ್ತು. ನನ್ನ ತಂದೆ ಕೃಷಿ ಮಾಡುತ್ತಿದ್ದರು. ನನ್ನ ತಂದೆಯ ಹೆಸರಿನಲ್ಲಿರುವ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ನಾನು ಆ ರೀತಿ ನನ್ನ ತಂದೆಯ ಹೆಸರಿನಲ್ಲಿರುವ ಪಹಣಿ ಪತ್ರಿಕೆ, ಮನೆಯ ತೆರಿಗೆ ಪಾವತಿ ರಶೀದಿಗಳನ್ನು ನೋಡಿರುತ್ತೇನೆ. ನಾನು ನೋಡಿದಂತಹ ನನ್ನ ತಂದೆಯ ಹೆಸರಿನಲ್ಲಿರುವ ಪಹಣಿ ಪತ್ರಿಕೆ ಮತ್ತು ಮನೆಯ ತೆರಿಗೆ ಪಾವತಿ ರಶೀದಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಅವುಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

2. ನನ್ನ ಅಜ್ಜ ಲಚ್ಮಯ್ಯ ನಾಯ್ಕ, ನನ್ನ ತಂದೆ ಜಟ್ಟಪ್ಪ ನಾಯ್ಕ ಹಾಗೂ ನನ್ನ ಚಿಕ್ಕಪ್ಪ ಕರಿಯಪ್ಪ ನಾಯ್ಕ ರವರು ಬರೆದುಕೊಟ್ಟಂತಹ ಯಾವುದಾದರೂ ದಾಖಲಾತಿ ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ಹೆಸರು ಜಟ್ಟಾ ನಾಯ್ಕ ಆಗಿರುತ್ತದೆ ಎಂದು ಹೇಳಿರುತ್ತಾರೆ. ಈ ಮೇಲೆ ಹೇಳಿದ ಮೂರು ಜನ ವಾದಿಗೆ ಬರೆದುಕೊಟ್ಟಂತಹ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ಈ ದಾವೆಯನ್ನು ನಮ್ಮ ವಿರುದ್ಧ ಯಾರು ದಾಖಲಿಸಿದ್ದಾರೆ ಎಂದು ಗೊತ್ತಿಲ್ಲ. ಈ ದಾವೆಯಲ್ಲಿ ಪ್ರತಿವಾದಿಗಳು ಯಾರು ಯಾರು ಎಂದು ಗೊತ್ತು. ಈ ದಾವೆಯನ್ನು 8 ರಿಂದ 10 ಜನ ಪ್ರತಿವಾದಿಗಳ ವಿರುದ್ಧ ದಾಖಲಿಸಿರಬಹುದು. ಈ ದಾವೆಯಲ್ಲಿ ವಾದಿಯವರು ಏನು ಸಾಧನೆ ಮಾಡುತ್ತಿದ್ದಾರೆ ಎಂದು ಸ್ವಲ್ಪ ಸ್ವಲ್ಪ ಗೊತ್ತಿರುತ್ತದೆ. ಈ ದಾವೆಯಲ್ಲಿ ವಾದಿಯವರು ಸಾಧನೆ ಮಾಡುತ್ತಿರುವಂತಹ ಕ್ರಯ ದಸ್ತಾವೇಜಿನ ಪ್ರತಿಯನ್ನು ಉಪನೋಂದಣಾಧಿಕಾರಿಯ ಕಚೇರಿಯಿಂದ ಪಡೆದು ಪರಿಶೀಲನೆ ಮಾಡಿರುವುದಿಲ್ಲ. ಅದೇ ರೀತಿ ಈ ದಾವೆ ದಾಖಲಿಸಿದ ನಂತರ ವಾದಿಯವರು ಹಾಜರುಪಡಿಸಿರುವಂತಹ ದಸ್ತಾವೇಜಿನ ಪ್ರತಿಯನ್ನು ಪಡೆದು ಪರಿಶೀಲನೆ ಮಾಡಿರುವುದಿಲ್ಲ. ವಾದಿಯವರು ಈ ದಾವೆಯಲ್ಲಿ ಹಾಜರುಪಡಿಸಿರುವಂತಹ ನಿಪಿ–4 ದಸ್ತಾವೇಜಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದ್ರಿ ದಸ್ತಾವೇಜನ್ನು ಯಾರು ಯಾರಿಗೆ ಬರೆದುಕೊಟ್ಟಿದ್ದಾರೆ ಎಂಬ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನಿಪಿ–4 ದಸ್ತಾವೇಜಿನ ಆಧಾರದಲ್ಲಿ ವಾದಿ ಈ ದಾವೆಯಲ್ಲಿ ಏನು ಸಾಧನೆ ಮಾಡುತ್ತಿದ್ದಾರೆ ಎಂದು ನಾನು

ತಿಳಿದುಕೊಂಡಿರುವುದಿಲ್ಲ. ಸದ್ರಿ ದಸ್ತಾವೇಜನ್ನು ನಾನು ಖುದ್ದು ನೋಡದೇ ಇರುವುದರಿಂದ ಅದರ ಬಗ್ಗೆ ನನಗೆ ಏನು ಹೇಳಲು ಆಗುವುದಿಲ್ಲ ಎಂದರೆ ಸರಿ.

3. ನನ್ನ ಅಜ್ಜ ಲಚ್ಮಯ್ಯ ನಾಯ್ಕ ರವರ ಬರವಣಿಗೆ ಮತ್ತು ಸಹಿಯ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪ ಕರಿಯಪ್ಪ ನಾಯ್ಕ ರವರ ಬರವಣಿಗೆ ಮತ್ತು ಸಹಿಯ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯವರ ಬರವಣಿಗೆ ಮತ್ತು ಸಹಿಯ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಲಚ್ಮಯ್ಯ ನಾಯ್ಕ ರವರು ಹೆಬ್ಬೆಟ್ಟು ಹಾಕುತ್ತಿದ್ದರು. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪರವರು ಹೆಬ್ಬೆಟ್ಟು ಹಾಕುತ್ತಿದ್ದರೋ ಅಥವಾ ಸಹಿ ಹಾಕುತ್ತಿದ್ದರೋ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪರವರು ಸಹಿ ಮಾಡಿರುವ ಯಾವುದೇ ದಾಖಲಾತಿಯನ್ನು ನಾನು ಇಂದಿನವರೆಗೆ ನೋಡಿರುವುದಿಲ್ಲ. ಅದೇ ರೀತಿ ಈ ದಾವೆಯ ಇತರ ಪ್ರತಿವಾದಿಗಳು ಸಹ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪರವರು ಸಹಿ ಮಾಡಿರುವ ಯಾವುದೇ ದಾಖಲಾತಿಯನ್ನು ಇಂದಿನವರೆಗೆ ನೋಡಿರುವುದಿಲ್ಲ.

4. ನಿಪಿ–4 ಕ್ರಯಪತ್ರದ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇರುವುದರಿಂದ ಸದ್ರಿ ಕ್ರಯಪತ್ರದ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಏನು ಹೇಳಿರುವುದಿಲ್ಲ ಎಂದರೆ ಸರಿ. ವಾದಿ ಯಾರು ಎಂದು ನನಗೆ ಗೊತ್ತಿಲ್ಲ. ಸದ್ರಿಯವರು ತನ್ನ ಮಗ ಅಬ್ದುಲ್ ಸಮದ್ ಸಿದ್ದಿಬಾಪಾ ರವರಿಗೆ ಬರೆದುಕೊಟ್ಟ ಅಧಿಕಾರ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ವಾದಿಯವರು ಯಾವೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ವಕೀಲರು ಸದ್ರಿ ದಾಖಲಾತಿಗಳ ಬಗ್ಗೆ ಕನ್ನಡದಲ್ಲಿ ಭಾಷಾಂತರಿಸಿ ಹೇಳಿರುತ್ತಾರೆ. ಸದ್ರಿ ದಾಖಲಾತಿಗಳನ್ನು ಖುದ್ದು ನೋಡಿರುವುದಿಲ್ಲ ಯಾಕೆಂದರೆ ನಮಗೆ ಇಂಗ್ಲೀಷ ಓದಲು ಬರುವುದಿಲ್ಲ.

5. ನನ್ನ ತಂದೆಯ ಜೀವಿತ ಕಾಲದಲ್ಲಿ, ನನ್ನ ತಂದೆ, ನನ್ನ ಚಿಕ್ಕಪ್ಪ ಮತ್ತು ನನ್ನ ಅಜ್ಜನ ನಡುವಿನ ಸಂಬಂಧ ಚೆನ್ನಾಗಿತ್ತು. ನಾನು 1978 ನೇ ಇಸವಿಯಲ್ಲಿ ಜನಿಸಿರುತ್ತೇನೆ. ನನ್ನ 7 ನೇ ವಯಸ್ಸಿನಲ್ಲಿ ನನಗೆ ಸಾಮಾನ್ಯ ಜ್ಞಾನ ಬಂದಿರಲಿಲ್ಲ ಎಂದರೆ ಸರಿ. ನಿಪಿ–4 ಕ್ರಯಪತ್ರದ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇರುವುದರಿಂದ ಆ ಬಗ್ಗೆ ನನ್ನ ತಂದೆ, ನನ್ನ ಚಿಕ್ಕಪ್ಪ ಮತ್ತು ನನ್ನ ಅಜ್ಜ ರವರನ್ನು ವಿಚಾರಿಸುವ ಪ್ರಮೇಯ ಉದ್ಭವಿಸಿರುವುದಿಲ್ಲ ಎಂದರೆ ಸರಿ.

6. 2013 ನೇ ಇಸವಿಯಲ್ಲಿ ನಾನು ಅಸಲು ದಾವೆ ಸಂಖ್ಯೆ 76/2013 ನ್ನು ದಾಖಲಿಸಿರುತ್ತೇನೆ. ಸದ್ರಿ ದಾವೆಯನ್ನು ಪಾಲುಪಟ್ಟಿಗಾಗಿ ದಾಖಲಿಸಿರುತ್ತೇನೆ. ಸದ್ರಿ ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ನನ್ನ ಮತ್ತು ನನ್ನ ಕುಟುಂಬದ ಇತರ ಸದಸ್ಯರ ಮಧ್ಯೆ ಯಾವುದೇ ತಕರಾರು, ಭಿನ್ನಾಭಿಪ್ರಾಯ ಇರಲಿಲ್ಲ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ಸೇರಿಸಿ

ನ್ಯಾಯಾಲಯದ ಮುಖಾಂತರ ಪಾಲು ಮಾಡಬೇಕೆಂಬ ಉದ್ದೇಶದಿಂದ ಈ ಮೇಲಿನ ದಾವೆಯನ್ನು ದಾಖಲಿಸಿರುತ್ತೇನೆ. ಹಾಗಾಗಿಯೇ ಸದ್ರಿ ದಾವೆಯನ್ನು ರಾಜಿ ಅರ್ಜಿ ಸಲ್ಲಿಸಿ ರಾಜಿ ಡಿಕ್ರಿ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಆ ರೀತಿ ರಾಜಿಯು ದಾವೆ ದಾಖಲಿಸುವ ಪೂರ್ವದಲ್ಲೇ ನಿರ್ಧಾರ ಮಾಡಲಾಗಿತ್ತು. ಸದ್ರಿ ದಾವೆಯನ್ನು ಈ ದಾವೆಯಲ್ಲಿರುವ ದಾವಾ ಆಸ್ತಿಯನ್ನು ನಮ್ಮ ಹೆಸರಿಗೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ದಾಖಲಿಸಿರುತ್ತೇವೆ ಎಂದರೆ ಸಾಕ್ಷಿಯು ಆಗ ನಮಗೆ ಗೊತ್ತಿರಲಿಲ್ಲ ಅದು ನಮ್ಮ ಕುಟುಂಬದ ಆಸ್ತಿ ಎಂದು ದಾವೆ ದಾಖಲಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯಲ್ಲಿರುವ 2 ಮತ್ತು 3 ನೇ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ತಂದೆಯ ಮರಣಾನಂತರ ಅವರ ಮಕ್ಕಳಾದ ನನಗೆ ಮತ್ತು ನನ್ನ ಇತರ ಸಹೋದರ ಸಹೋದರಿಯರಿಗೆ ಹಕ್ಕು ಪ್ರಾಪ್ತವಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮರಣ ಹೊಂದುವವರೆಗೆ ಈ ಮೇಲೆ ಹೇಳಿದ ಎರಡು ಆಸ್ತಿಗಳು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಕರಿಯಪ್ಪ ನಾಯ್ಕ ರವರ ಹಕ್ಕಿನ ಆಸ್ತಿಗಳಾಗಿದ್ದವು ಎಂದರೆ ಸರಿ. ದಾವಾ ಆಸ್ತಿಯಲ್ಲಿರುವ 1 ನೇ ಆಸ್ತಿಯು ನನ್ನ ಅಜ್ಜ ಲಚ್ಮಯ್ಯ ನಾಯ್ಕರವರ ಸ್ವಂತದ ಹಕ್ಕಿನ ಆಸ್ತಿಯಾಗಿತ್ತು ಎಂದರೆ ಸರಿ. ನನ್ನ ಅಜ್ಜ ಲಚ್ಮಯ್ಯ ನಾಯ್ಕರವರ ಮರಣಾನಂತರ ಸದ್ರಿ ಆಸ್ತಿಯು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಹೆಸರಿಗೆ ಬಂತು ಎಂದರೆ ಸರಿ. ನನ್ನ ತಂದೆಯ ಮರಣಾನಂತರ ಸದ್ರಿ ಆಸ್ತಿಯಲ್ಲಿ ಅವರ ವಾರಸುದಾರರಾದ ನಮಗೆ ಹಕ್ಕು ಬಂದಿರುತ್ತದೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು .**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**